ಪ್ರತಿಯೊಬ್ಬರೂ ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿರಬೇಕೆಂಬ ಉದ್ದೇಶದಿಂದ ಪಿಂಚಣಿ ಅದಾಲತ್ ಅನ್ನು ಮಾಡಿದ್ದೇವೆ.

Loss of Farmers Crop by wild Animals

15 (01) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ) : ಮಾನ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವನ್ಯಜೀವಿಗಳ ದಾಳಿಯಿಂದ ಬೆಳೆಹಾನಿ ಮತ್ತು ಪ್ರಾಣ ಹಾನಿಯಾದರೆ ಆ ರೈತರಿಗೆ ಹಾಗೂ ಬೆಳೆಗೆ ಸರ್ಕಾರ ನೀಡುವ ಪರಿಹಾರದ ಮೊತ್ತ ಎಷ್ಟು, ಇದನ್ನು ಅಧಿಕಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ; ಪರಿಹಾರ ಮೊತ್ತದ ಏರಿಕೆಯ ಪ್ರಮಾಣ ಎಷ್ಟು,

ಆ) ಪರಿಹಾರ ನೀಡವ ಪ್ರಕ್ರಿಯೆಯ ಮಾನದಂಡಗಳು ಯಾವುವು;

ಇ) ಇದುವರೆಗೆ ಪರಿಹಾರವನ್ನು ನೀಡಲಾಗುತ್ತಿದ್ದುದು ನಿಜವೇ; ಈಗ ಬೆಳೆ ಹಾನಿಯ ಪ್ರಮಾಣಾನುಸಾರ ಪರಿಹಾರ ನಿಗಧಿಪಡಿಸಲಾಗುವುದೇ;

ಈ) ಅರಣ್ಯ ಇಲಾಖಾ ವ್ಯಾಪ್ತಿಯ ಪ್ರಾಣಿಗಳಿಂದ ಹಾನಿಯಾದರೂ ಪರಿಹಾರವನ್ನು ಕೃಷಿ ಇಲಾಖೆಯಿಂದ ನಿಗಧಿಪಡಿಸಿ ಬೆಳೆಹಾನಿಗೆ ಪರಿಹಾರ ನೀಡುವ ಕ್ರಮದ ಬಗ್ಗೆ ಎರಡೂ ಇಲಾಖೆಗಳ ಸಮನ್ವಯ ಏರ್ಪಡಿಸಲಾಗುವುದೇ (ವಿವರ ಒದಗಿಸುವುದು),

ಉ) ಪ್ರಸ್ತುತ ಒಂದು ಎಕರೆಗೆ ಎಷ್ಟು ಪರಿಹಾರ ಮೊತ್ತ ನೀಡಲಾಗುತ್ತಿತ್ತು, ಹೊಸ ಯೋಜನೆಯ ಕ್ರಮದಿಂದಾಗಿ ಬೆಳೆ ಹಾನಿಗೊಳಗಾದ ರೈತರಿಗೆ ಯಾವ ಬೆಳೆಗೆ ಎಷ್ಟು ಪರಿಹಾರ ನೀಡಲಾಗುವುದು ಹಾಗೂ ಕಾಡು ಪ್ರಾಣಿಯಿಂದ ಪ್ರಾಣ ಹಾನಿಯಾದರೆ ಪರಿಹಾರದ ಮೊತ್ತ ಎಷ್ಟು (ವಿವರ ಒದಗಿಸುವುದು)?

ಶ್ರೀ ಬಿ.ರಮಾನಾಥ ರೈ (ಮಾನ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು)

ಅ) ವನ್ಯಜೀವಿಗಳ ದಾಳಿಯಿಂದ ಬೆಳೆಹಾನಿಯಾದರೆ, ರೈತರಿಗೆ ಸರ್ಕಾರಿ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ 30-04-2011ರ ಪ್ರಕಾರ ದಯಾತ್ಮಕ ಧನ ಪಾವತಿಸಲಾಗುತ್ತಿದೆ ಹಾಗೂ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಸರ್ಕಾರಿ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ 03-08-2011ರ ಪ್ರಕಾರ ರೂ. 5.00 ಲಕ್ಷಗಳ ದಯಾತ್ಮಕ ಧನ ವನ್ನು ಪಾವತಿಸಲಾಗುತ್ತದೆ. ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಬೆಳೆನಾಶ, ಸಾಕುಪ್ರಾಣಿಗಳ ಹತ್ಯೆ, ಮಾನವರಿಗೆ ಉಂಟಾಗುವ ಗಾಯ, ಶಾಶ್ವತ ಅಂಗವಿಕಲತೆಗೆ ಮತ್ತು ಆಸ್ತಿ ನಷ್ಟಕ್ಕೆ ಪ್ರಸ್ತುತ ನೀಡಲಾಗಿತ್ತಿರುವ ದಯಾತ್ಮಕ ಧನವನ್ನು ಪರಿಷ್ಕರಿಸಿ ಹೆಚ್ಚಿಸಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಆ) ದಯಾತ್ಮಕಧನವನ್ನು ಹಾಲಿ ಇರುವ ಮೇಲಿನ ಸರ್ಕಾರಿ ಆದೇಶಗಳ ಪ್ರಕಾರ ಪಾವತಿಸಲಾಗುತ್ತಿದೆ.

ಇ) ಹೌದು. ಬೆಳೆ ನಾಶದ ಪ್ರಮಾಣವನ್ನು ಪರಿಶೀಲನೆ ಮಾಡಿದ ನಂತರ ವಿವಿಧ ಬೆಳೆಗಳಿಗೆ ನಿಗಧಿಪಡಿಸಿರುವ ಪ್ರಚಲಿತ ದರಗಳ ಆಧಾರದ ಮೇಲೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

ಈ) ಪರಿಹಾರಧನವನ್ನು ಹಾಲಿ ಸರ್ಕಾರಿ ಆದೇಶದ ಪ್ರಕಾರ ಸಂತ್ರಸ್ಥರಿಗೆ ಪಾವತಿಸಲಾಗುತ್ತಿದೆ.

ಉ) ವನ್ಯ ಪ್ರಾಣಿಗಳಿಂದ ಉಂಡಾಗುವ ಬೆಳೆಹಾನಿ ಪ್ರಕರಣಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ 30-04-2011ರ ಅನುಸಾರ ಕನಿಷ್ಟ ಮೊತ್ತ ರೂ.7,500/- ಮತ್ತು ಗರಿಷ್ಟ ರೂ.50,000/- ಗಳನ್ನು ಪಾವತಿಸಲು ಅವಕಾಶವಿರುತ್ತದೆ.

ಬಾಳೆನಾಶದ ಪ್ರಮಾಣವನ್ನು ಪರಿಶೀಲನೆ ಮಾಡಿದ ನಂತರ ವಿವಿಧ ಬೆಳೆಗಳಿಗೆ ದರ ನಿಗಧಿಪಡಿಸಿ ಸರ್ಕಾರ ಹೊರಡಿಸಿರುವ ಆದೇಶ ಸಂಖ್ಯೆ ಅಪಜೀ 162 ಎಫ್‌ಡಬ್ಲ್ಯೂಎಲ್ 2008 ದಿ 05.06.2009 ಪ್ರಕಾರ ದಯಾತ್ಮಕಥನ ಪಾವತಿಸಲಾಗುತ್ತಿದೆ. ವನ್ಯಜೀವಿಗಳ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಸರ್ಕಾರಿ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ 03-08-2011ರ ಪ್ರಕಾರ ರೂ. 5.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಬದಗಿಸಿದ್ದಾರೆ. ವನ್ಯಜೀವಿಗಳಿಂದ ಬೆಳೆ ಹಾನಿ ಆಗಿರುವಂಥವುಗಳಿಗೆ ಕೊಡುತ್ತಿರುವ ಪರಿಹಾರವನ್ನು ಹೆಚ್ಚಿಸಬೇಕೆಂದು ಕೇಳಿದ್ದೇನೆ. ಹಿಂದೆ ಅಂದರೆ 2010-11ನೇ ಸಾಲಿನಲ್ಲಿ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಪರಿಹಾರದ ಮೊತ್ತವನ್ನು ಒಂದು ಹಂತದಲ್ಲಿ ಏರಿಕೆ ಮಾಡಿತ್ತು. ಇವತ್ತಿನದಿವಸ ಪ್ರಕೃತಿಯ ವಿಕೋಪದಿಂದ ರೈತರ ಬೆಳೆ ಹಾನಿಯಾಗುತ್ತಿರುವುದನ್ನು ನಾವು ಕಾಣುತ್ತೊದ್ದೇವೆ. ಅತಿವೃಷ್ಟಿಯಿಂದ ಮತ್ತು ಕ್ರಿಮಿ, ಕೀಟಗಳಿಂದ ಹಾಗೂ ರೋಗರುಜಿನಗಳಿಂದ, ಬರಗಾಲದಿಂದ ಬೆಳೆ ಹಾನಿಯಾಗುತ್ತಿರುವುದನ್ನು ಒಂದು ಕಡೆ ನೋಡುತ್ತಿದ್ದೇವೆ ಆದರೆ, ನಿಮಗೆ ಗೊತ್ತಿರುವಂತೆ ಮಲೆನಾಡು ಮತ್ತು ಕರಾವಳಿ ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ ಸಾಕಷ್ಟು ಬೆಳೆ ಹಾನಿ ವನ್ಯ ಪ್ರಾಣಿಗಳಿಂದ ಆಗುತ್ತಿದೆ. ಆನೆ ಹಾವಳಿ ಅಂದರೆ ಆನೆಗಳು ಬಂದು ಕಬ್ಬು, ಭತ್ತ ತಿಂದು ಹೋಯಿತೆಂದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ. ಆದರೆ, ಮಂಗ ಏನು ತಿನ್ನುತ್ತಿದೆ, ಹಂದಿ ಏನು ಲೂಟಿ ಮಾಡುತ್ತಿದೆ ಹಾಗು ಕಾಡು ಎಮ್ಮೆ ಏನು ಹಾನಿ ಮಾಡುತ್ತಿದೆಯೋ ಅದಕ್ಕೆಲ್ಲ ಪರಿಹಾರ ಕೊಡಬೇಕಾಗುತ್ತದೆ. ಇವತ್ತಿನದಿವಸ ಒಂದು ಬಾಳೆಗೂನೆಗೆ ಕೇವಲ 10 ರೂಪಾಯಿ ಪರಿಹಾರ ಕೊಡುತ್ತಾರೆ.

ಅಧ್ಯಕ್ಷರು :- ಏನು ಕೊಡಬೇಕೆಂದು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನಮ್ಮಲ್ಲಿ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಗಳು ಹೇಳುವ ರೀತಿಯಲ್ಲಿಯಾದರೂ ಪರಿಹಾರ ಕೊಡಬೇಕಲ್ಲವೇ? ಒಂದು ಅಡಿಕೆ ಗಿಡ ಹೋದರೆ ಕೇವಲ 25 ರೂಪಾಯಿ ಪರಿಹಾರವನ್ನು ಕೊಡುತ್ತಾರೆ. ತೆಂಗಿನ ಗಿಡಕ್ಕೆ 50 ರೂಪಾಯಿ ಕೊಡುತ್ತಾರೆ. ಹೀಗೆಲ್ಲಾ ಆಗುವುದಕ್ಕೆ ಅವಕಾಶ ಆಗಬಾರದು.

ಅಧ್ಯಕ್ಷರು :– ಏನು ಪರಿಹಾರ ಕೊಡಬೇಕೆಂಬುವುದರ ಬಗ್ಗೆ ದಯವಿಟ್ಟು ಕೇಳಿ. ಅಂದರೆ, ಒಂದು ಅಡಿಕೆ ಮರ ಮತ್ತು ಬಾಳೆಗೊನೆಗೆ ಇಷ್ಟು ಪರಿಹಾರ ಕೊಡಬೇಕೆಂದು ನಿದಿಷ್ಟವಾಗಿ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಯಾವ ಬೇಳೆ ಹಾನಿಯಾಗಿದೆಯೋ, ಅದಕ್ಕೆ ವೈಜ್ಞಾನಿಕವಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ರೈತರಿಗೆ ಯಾವರೀತಿಯಾಗಿ ಪರಿಹಾರ ಕೊಡಬೇಕೆಂದು ಮಾಡುವ ಶಿಫಾರಸ್ಸಿನ ಅನುಗುಣವಾಗಿ ಅದನ್ನು ಅರಣ್ಯ ಇಲಾಖೆಯವರು ಭರಿಸುವಂಥ ಕೆಲಸ ಆಗಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತಿದ್ದೇನೆ.

ಅಧ್ಯಕ್ಷರು :– ಅವರು ಏನು ಕೇಳಿದ್ದಾರೆಯೋ ಅಷ್ಟಕ್ಕೆ ಮಾತ್ರ ಸರಿಯಾಗಿ ಉತ್ತರ ಕೊಡಿ.

ಶ್ರೀ ಬಿ.ರಮಾನಾಥ್ ರೈ :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ ಈಗ ಕೊಡತಕ್ಕಂಥ ಪರಿಹಾರವನ್ನು ಹೆಚ್ಚಿಗೆ ಮಾಡಬೇಕೆಂದು ಹೇಳಿದ್ದಾರೆ ಈಗಾಗಲೇ ಇದಕ್ಕೆ ಸಂಬಂಧಪಟ್ಟಂಥ ಒಂದು ಪರಿಷ್ಕೃತ ಶಿಫಾರಸ್ಸನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಆದಷ್ಟು ಬೇಗ ಮಂಜೂರು ಪಡೆದು ಪರಿಷ್ಕೃತ ಪರಿಹಾರ ಹಣವನ್ನು ನೀಡುವ ಕೆಲಸವನ್ನು ಮಾಡುತ್ತೇವೆ. ಕೃಷಿ ಇಲಾಖೆಯ ಅಧಿಕಾರಿಗಳು ನೀಡಿರುವ ಶಿಫಾರಸ್ಸಿನ ಆಧಾರದ ಮೇಲೆ ಸಂಪೂರ್ಣವಾಗಿ ಪರಿಹಾರ ಕೊಡಬೇಕೆಂದು ಇದ್ದೇವೆ. ನಿಮ್ಮ ಅಪೇಕ್ಷೆ ಕೂಡ ಅದೇ ಆಗಿದೆ. ಅಂಗವಿಕಲತೆಯಾದವರಿಗೆ ವೈದ್ಯಕೀಯ ಶಿಫಾರಸ್ಸಿನ ಆಧಾರದ ಮೇಲೆ ಅವರಿಗೆ ವೈದ್ಯಕೀಯ ಸವಲತ್ತುಗಳನ್ನು ಕೊಡಬೇಕೆಂದು ಪರಿಷ್ಕೃತವಾದ

ಶಿಫಾರಸ್ಸಿನಲ್ಲಿ ಮಾಡಿ ಅದನ್ನು ಆರ್ಥಿಕಇಲಾಖೆಗೆ ಕಳುಹಿಸಲಾಗಿದೆ ಆದಷ್ಟು ಬೇಗ ಇದಕ್ಕೆ ಮಂಜೂರಾತಿ ಪಡೆದುಕೊಂಡು ಪರಿಷ್ಕೃತ ದರವನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು :– ಮಂಗ ತಿಂದು ಹಾಳಾಗುವಂಥ ಬೆಳೆಗೆ ಪರಿಹಾರ ಕೊಡುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಬಿ.ರಮಾನಾಥ ರೈ :– ವನ್ಯ ಪ್ರಾಣಿಗಳಿಂದ ನಷ್ಟವಾಗಿರತಕ್ಕಂಥ ಯಾವುದೇ ಕೃಷಿಬೆಳೆಗೆ ಪರಿಹಾರವನ್ನು ಹೆಚ್ಚಿಸತಕ್ಕಂಥದ್ದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ :– ಮಂಗಗಳಿಂದ ಹಾನಿಯಾಗಿರುವುದಕ್ಕೆ ನಮ್ಮಲ್ಲಿ ಪರಿಹಾರ ಕೊಟ್ಟಿಲ್ಲ. ಆದ್ದರಿಂದ, ಇದಕ್ಕೂ ಸಹ ಪರಿಹಾರವನ್ನು ಕೊಡುತ್ತೇವೆಂದು ಹೇಳಬೇಕು.

ಶ್ರೀ ಬಿ ರಮಾನಾಥ ರೈ :– ಈಗ ಪರಿಷ್ಕೃತ ಶಿಫಾರಸ್ಸು ಮಾಡಿ ಹೆಚ್ಚಿನ ಪರಿಹಾರ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ :– ಮಂಗಗಳಿಂದ ಹಾನಿಯಾಗಿರುವುದಕ್ಕೆ ಕೊಡುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕು. ಮಂಗಗಳನ್ನು ಏನು ಮಾಡ ಬೇಕೆಂಬುದು ನಮಗೆ ಗೊತ್ತಿದೆ ಅದಕ್ಕಾದರೂ ಅವಕಾಶ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೂ ಸಹ ಇಲ್ಲಿಯೇ ಇದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿ ಗಳಿಗೆ ಮತ್ತು ನನಗೂ ಸಹ ಗೊತ್ತಿದೆ. ನಾನು ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ.

ಅಧ್ಯಕ್ಷರು :– ಗೊತ್ತಿರುವುದು ಬೇಡ, ಪ್ರಶ್ನೆ ಮಾತ್ರ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಆರ್ಥಿಕ ಇಲಾಖೆಗೆ ಯಾವು ದಾದರೂ ಪ್ರಸ್ತಾವನೆ ಹೋದರೆ ಅಲ್ಲಿಗೆ ಮುಗಿಯಿತಷ್ಟೆ. ಆದ್ದರಿಂದ, ಅಲ್ಲಿಗೆ ಹೋಗಿರುವ ಪ್ರಸ್ತಾವನೆಗೆ ಯಾವಾಗ ಅನುಮತಿ ಸಿಗುತ್ತದೆಂದು ಅಂದರೆ, 15

ದಿವಸ ಅಥವಾ ಒಂದು ತಿಂಗಳು ಅಥವಾ 2 ತಿಂಗಳಲ್ಲಿ ಬರುತ್ತದೆಯೋ ಎಂಬ ಬಗ್ಗೆ ಮಾನ್ಯ ಅರಣ್ಯ ಸಚಿವರು ಒಂದು ಭರವಸೆಯನ್ನಾದರೂ ಇವತ್ತು ಕೊಟ್ಟರೆ ಒಳ್ಳೆಯದು. ಏಕೆಂದರೆ, ಸರ್ಕಾರದ ಯಾವುದೇ ಒಂದು ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಹೋದರೆ ಅದು ಕೇವಲ ಪರಿಶೀಲನೆಯಲ್ಲಿರುತ್ತದೆಯಷ್ಟೆ. ಅಲ್ಲಿಂದ ಬರುವವರೆಗೆ ಇವರು ಕಾಯ ಬೇಕಾಗುತ್ತದೆ.

ಶ್ರೀ ಬಿ.ರಮಾನಾಥ ರೈ :– ಮಾನ್ಯ ಸದಸ್ಯರು ಏನು ಸಂಶಯವನ್ನು ವ್ಯಕ್ತಪಡಿಸಿದ್ದಾರೆಯೋ ಅದನ್ನು ನಿವಾರಣೆ ಮಾಡತಕ್ಕಂಥದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಒಂದು ಕಾಲ ಮಿತಿಯೊಳಗೆ ಮಾಡಿತ್ತೇನೆಂದು ಹೇಳಿದರೆ ಒಳ್ಳೆಯದು.

ಶ್ರೀ ಬಿ.ರಮಾನಾಥ ರೈ :– ಕಾಲಮಿತಿಯೊಳಗೆ ಆದಷ್ಟು ಶೀಘ್ರವಾಗಿ ಮತ್ತು ತುರ್ತಾಗಿ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ತುರ್ತು ಎಂದರೆ ಎಷ್ಟು ತಿಂಗಳೆಂದಾದರೂ ಹೇಳಬೇಕು.

ಶ್ರೀ.ಕೆ.ಜೆ.ಬೋಪಯ್ಯ :– ಮಂಗಗಳು Wildlife animals ಅಡಿಯಲ್ಲಿ ಬರುತ್ತದೆಯೋ ಅಥವಾ ಇಲ್ಲವೋ ಹೇಳಿ. ಹಾಗೆಯೇ ಮಂಗಗಳಿಂದ ಆಗುವ ಬೆಳೆ ಹಾನಿಗೆ ಪರಿಹಾರ ಕೊಡುತ್ತೀರಾ?

ಅಧ್ಯಕ್ಷರು :– ಎಲ್ಲರೂ ಈ ರೀತಿಯಾಗಿ ಮಾತನಾಡಿದರೆ ಹೇಗೆ. ಅವರು ಇನ್ನೂ ಯೀಲ್ಡ್ ಆಗಿಲ್ಲ. ಅಷ್ಟರೊಳಗೆ ನೀವು ನಿಂತುಕೊಂಡು ಮಾತ ನಾಡಿದರೆ ಹೇಗೆ?

ಶ್ರೀ ಬಿ.ರಮಾನಾಥ ರೈ :– ಇದೇ ರೀತಿಯಾಗಿ ಉತ್ತರ ಕೊಡಬೇ ಕೆಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಆರ್ಥಿಕ ಇಲಾಖೆಯಿಂದ ಇದಕ್ಕೆ ಎಷ್ಟು ತಿಂಗಳಲ್ಲಿ ಒಪ್ಪಿಗೆ ಸಿಗುತ್ತದೆ.?

ಶ್ರೀ ಬಿ.ರಮಾನಾಥ ರೈ :– ಬೆಳೆ ಹಾನಿ ಬಗ್ಗೆ ಕೃಷಿ ಇಲಾಖೆಯವರು ಏನು ಶಿಫಾರಸ್ಸು ಮಾಡುತ್ತಾರೆಯೋ ಅಷ್ಟನ್ನು ಕೊಡುವುದಕ್ಕೆ ನಾವು ಶಿಫಾರಸ್ಸು ಮಾಡಿದ್ದೇವೆ. ಶೀಘ್ರದಲ್ಲಿ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು :– ಮಾನ್ಯ ಸುನೀಲ್ ಕುಮಾರ್‌ರವರದು ಮುಂದಿನ ಪ್ರಶ್ನೆ ಇದೆ. ಮುಜರಾಯಿ ಇಲಾಖೆ ಸಚಿವರು ಬಂದಿಲ್ಲ. ನಿಮ್ಮ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ.

Works of Left Irrigation Project

4 (85) ಶ್ರೀ ಗೋವಿಂದ ಎಂ.ಕಾರಜೋಳ · ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ, ಬಾಗಲಕೋಟೆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಬಬಲೇಶ್ವರ–ಸಾವಳಗಿ ಏತ ನೀರಾವರಿ ಯೋಜನೆಯ ಕಾಮಗಾರಿ ಸರ್ಕಾರ ಮಂಜೂರಾತಿ ನೀಡಿದ್ದಾಗ್ಯೂ. ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಆ) ಬಬಲೇಶ್ವರ–ಸಾವಳಿಗಿ ಭಾಗದ ರೈತರ ಹೊಲಗಾಲುವೆ (ಫ್ಲೋ ಇರಿಗೇಶನ) ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಎಷ್ಟುಅವಧಿಯಲ್ಲಿ ಕಾಮಗಾರಿಕೆಯನ್ನು ಪೂರ್ಣಹೊಳಿಸಲಾಗುವುದು.

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ತುನಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯು ಕರ್ನಾಟಕ ನೀರಾವರಿ ನಿಗಮದ ಅಡಿಯಲ್ಲಿ ಕೈಗೊಂಡಿದ್ದು ಕಾಮಗಾರಿಯ ಪ್ರಸ್ತುತ ಹಂತ ಕೆಳಗಿನಂತಿರುತ್ತದೆ. ತುನಚಿ– ಬಬಲೇಶ್ವರ ಏತ ನೀರಾವರಿ ಯೋಜನೆಗೆ ಬೇಕಾದ ವಿವರವಾದ ಯೋಜನಾ ವರದಿ ಹಾಗೂ ಡಿ.ಟಿ.ಪಿ ತಯಾರಿಸುವ ಸರ್ವೆ ಕಾಮಗಾರಿಗೆ ದಿನಾಂಕ:19–03–2013